ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು.

(ಗೊಂದಲ)

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಟಿ. ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 27.11.2015ರ 30ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 229 ಪ್ರಶ್ನೆಗಳ ಪೈಕಿ 30 ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಮಂಡಿಸಲಾಗಿದೆ. (ಅನುಬಂಧ–3)

(ಗೊಂದಲ)

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ. ಶ್ರೀ ಹೆಚ್. ಸಿ. ಬಾಲಕೃಷ್ಣ, ಎಂ. ಟಿ. ಕೃಷ್ಣಪ್ಪ ಯಾರೂ ಇಲ್ಲ. ಇದು ಮುಂದೆ ಹೋಯಿತು.

(ಗೊಂದಲ)

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು.

ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು: ಶ್ರೀ ಪಿ. ಆರ್. ಸುಧಾಕರಲಾಲ್ ಕೇಳಿ, ಇಲ್ಲ.

(ಗೊಂದಲ)

ಶ್ರೀ ಭೀಮಾನಾಯಕ್ ಎಲ್‌ಬಿಪಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸುಧಾಕರ್‌ಲಾಲ್‌ರವರು ಇದ್ದಾರೆ.

(ಗೊಂದಲ)

ಅಧ್ಯಕ್ಷರು: ನೀವು ಕೇಳುವುದಕ್ಕೆ ಬಂದಿದ್ದೀರಾ? ಎಕೆ ಬಂದಿದ್ದೀರಿ; ಇನ್ನೂ ಅವರು ಅಲ್ಲಿ ಹುಡುಕುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸುಧಾಕರಲಾಲ್‌ರವರೆ, ತಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ. ಅದಕ್ಕೆ ಉತ್ತರ ಬಂದ ಮೇಲೆ ತಮಗೆ ಕಳುಹಿಸಿಕೊಡುತ್ತಾರೆ ಬಿಡಿ.

(ಗೊಂದಲ)

ಅಧ್ಯಕ್ಷರು: ಡಾ: ಸಿ. ಎನ್. ಅಶ್ವಥ್ ನಾರಾಯಣ, ಇಲ್ಲ.

(ಗೊಂದಲ)

10. ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು: ಈಗ ಮಾನ್ಯ ಬೋಪಯ್ಯನವರ ಗಮನ ಸೆಳೆಯುವ ಸೂಚನೆ

(ಗೊಂದಲ)

1. ವಿಷಯ: ವಿರಾಜಪೇಟೆ ತಾಲ್ಲೂಕು ಬೊಮ್ಮಾಡು ಗಿರಿಜನ ಕಾಲೋನಿಯ ಮೂಲಭೂತ ಸೌಕರ್ಯ ಕಾಮಗಾರಿಗಳಿಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಅಡ್ಡಿಪಡಿಸುತ್ತಿರುವ ಬಗ್ಗೆ.

ಅಧ್ಯಕ್ಷರು: ಮಾನ್ಯ ಬೋಪಯ್ಯನವರಿಗೆ ಉತ್ತರವನ್ನು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ವಿರಾಜಪೇಟೆ ತಾಲ್ಲೂಕು, ನಾಲ್ಕೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಮ್ಮಾಡು ಗಿರಿಜನ ಕಾಲೋನಿಯಲ್ಲಿ ಪ್ರಾರಂಭಿಸಿರುವ ರಸ್ತೆ, ಸೇತುವೆ ಮತ್ತು ಆಟದ ಮೈದಾನ ನಿರ್ಮಾಣಕ್ಕಾಗಿ ಗುತ್ತಿಗೆದಾರರು ಹಾಡಿಯ ಪಕ್ಕದಲ್ಲಿರುವ ಅರಣ್ಯ ಭೂಮಿಯಲ್ಲಿ ಮಣ್ಣನ್ನು ಅಗೆದು, ಕಾಮಗಾರಿಗೆ